ನೆರವೇರಿತು, ಮಗುವೂ ಹುಟ್ಟಿತು.

‘ಒಬ್ಬರೊಂದಿಗೆ ಜೀವನವನ್ನು ನಿರ್ವಹಿಸುವುದು ತುಂಬಾ ಕಷ್ಟವಾಗುತ್ತದೆ. ನಾನು ಇಪ್ಪತ್ತು ವರ್ಷಗಳ ಕಾಲ ಲಾರ್ಸ್‌ರ ತಂದೆಯೊಂದಿಗೇ ಇದ್ದೆ...’

‘ಇಪ್ಪತ್ತು ವರ್ಷಗಳೆಂದರೆ ತುಂಬಾ ದೀರ್ಘ...’

‘ಹೌದು. ಲಾರ್ಸ್ ಹದಿನೈದನೇ ವಯಸ್ಸಿನಲ್ಲಿದ್ದಾಗ ನಾವು ಬೇರೆಯಾಗಿದ್ದೆವು. ಈಗ ನಾವು ಬೇರೆ ಬೇರೆಯಾಗಿರುತ್ತಾ ಸಾಕಷ್ಟು ವರ್ಷಗಳಾದವು.’

ನೀವು ಈಗಲೂ ಯುವತಿಯಂತಿದ್ದೀರಿ. ಬೇರೆ ಸಂಗಾತಿಯನ್ನು ಹುಡುಕಿಕೊಳ್ಳಿ.’ ನಾನು ತಮಾಷೆ ಮಾಡಿದೆ.

‘ಮನಸ್ಸಿಲ್ಲ’ ಅವರು ರೇಗಿದರು, ‘ನೋ ಮ್ಯಾನ್ ಇನ್ ಮೈ ಹೋಮ್ ನೌ. ನನ್ನೊಂದಿಗಿರುವ ನಾಯಿಯೇ ಸಾಕು.’

ಲಾರ್ಸ್‌ನ ಪರಿವಾರದಲ್ಲಿ ಪ್ರತಿಯೊಬ್ಬರೂ ಒಂಟಿಯಾಗಿ ವಾಸಿಸುತ್ತಿದ್ದರು, ಅದೂ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿದ್ದರು. ಆದರೆ ಅಜ್ಜಿಗೆ ತನ್ನದೇ ಆದ ಮನೆಯಿತ್ತು. ನಾನು ಲಾರ್ಸ್‌ನ ತಾಯಿ, ತಂದೆ, ಮಾವ, ಅಜ್ಜಿ... ಎಲ್ಲರನ್ನೂ ಭೇಟಿಯಾದೆ, ಎಲ್ಲರೂ ಒಳ್ಳೆಯ ವ್ಯಕ್ತಿಯಂತೆ ಕಂಡರು, ಆದರೂ ಅವರು ಒಂಟಿಯಾಗಿದ್ದರು. ಅವರಿಗೆ ಸಂಬಂಧಿಕರ ಅವಶ್ಯಕತೆಯೂ ಇರಲಿಲ್ಲ. ಆದರೆ ಒಂದು ವಿಷಯ... ಎಲ್ಲರೂ ತಿನ್ನುವ ಬಗ್ಗೆ ತುಂಬಾ ಆಸಕ್ತಿಯನ್ನು ಹೊಂದಿದ್ದರು. ಅಡುಗೆ ತಯಾರಿಸಿ, ಮಜವಾಗಿ ತಿನ್ನುತ್ತಿದ್ದರು. ತುಂಬಾ ಸ್ವಾದಿಷ್ಟವಾಗಿದೆ ಎಂದು ಬೆರಳು ಚೀಪಿ ಹೇಳುತ್ತಿದ್ದರು. ಅಲ್ಲದೆ ನಿಮ್ಮಲ್ಲಿ ರೆಸಿಪಿ ಯಾಚಿಸಿ, ತಯಾರಿಸುವ ವಿಧಾನವನ್ನೂ ಕೇಳುತ್ತಾರೆ.

ನಾನು ಡೆನ್ಮಾರ್ಕ್‌ನಲ್ಲಿ ನೆಲೆಸಬೇಕಿತ್ತು. ಲಾರ್ಸ್‌ನ ಪರಿವಾರದವರನ್ನು ಅರ್ಥ ಮಾಡಿಕೊಳ್ಳುವುದು ಮಾತ್ರ ನನ್ನ ಉದ್ದೇಶವಾಗಿರಲಿಲ್ಲ. ಪಾಲ್ ನೀವೇ ಖುದ್ದು, ‘ಮನುಷ್ಯ ವಾಸಿಸಲು ಎಲ್ಲಿಗಾದರೂ ಹೋಗಲಿ, ಆತ್ಮನಿರ್ಭರತೆ ಮುಖ್ಯ. ಜೀವನದಲ್ಲಿ ಯಾವಾಗ, ಏನಾಗುತ್ತೆ ಅಂತ ಗೊತ್ತಿಲ್ಲ’ ಎಂದಿದ್ದಿರಿ. ಈ ದೇಶವನ್ನು ನೋಡುತ್ತಾ, ಅನುಭವಿಸುತ್ತಾ, ಇಲ್ಲಿಯ ಸಂಬಂಧಿಕರನ್ನು ಅರ್ಥಮಾಡಿಕೊಳ್ಳುತ್ತಾ, ನೌಕರಿಗೆ ನಿರಂತರವಾಗಿ ಪ್ರಯತ್ನವನ್ನು ಮಾಡುತ್ತಿದ್ದೆ. ನನಗೆ ಬೋಧನೆಯ ಬಗ್ಗೆ ವಿಶೇಷ ಅನುಭವವಿತ್ತು. ನನ್ನ ಅದೃಷ್ಟದಿಂದ ಡೆನ್ಮಾರ್ಕ್‌ಗೆ ಬಂದ ಐದು ತಿಂಗಳ ನಂತರ, ಜೋಶ್ ಹೋಗುತ್ತಿದ್ದ ಶಾಲೆಯಲ್ಲಿ ನನಗೆ ಕಂಪ್ಯೂಟರ್ ಮತ್ತು ಸೈನ್ಸ್ ಅಧ್ಯಾಪಕಿಯ ನೌಕರಿ ಸಿಕ್ಕಿತು. ಡಿಸೆಂಬರ್‌ನಲ್ಲಿ ಕ್ರಿಸ್‌ಮಸ್ ರಜಾದ ನಂತರ, ಹೊಸ ವರ್ಷ ಜನವರಿಯಿಂದ ನಾನು ಆ ಸ್ಕೂಲಿಗೆ ಸೇರಿಕೊಳ್ಳಬೇಕಿತ್ತು.

ನೌಕರಿಗೆ ಆಫರ್ ಸಿಕ್ಕ ದಿನ ನಾನು ಖುಷಿಯಿಂದ ಬೀಗಿದೆ. ಕೇಕ್ ಖರೀದಿಸಿ ಮೊದಲು ಲಾರಾರ ಮನೆಗೆ ಹೋದೆ. ಅವರ ಸಂಸ್ಕೃತಿಯ ಕೆಲವು ವಿಚಾರಗಳನ್ನು ಕಲಿತಿದ್ದೆ, ನನ್ನ ಸಂಸ್ಕೃತಿಗೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಅವರಿಗೂ ಕಲಿಸಿದೆ. ನಾನು ನನ್ನ ಅತ್ತೆಗೆ, ‘ನಾವು ನಮ್ಮವರ ಮನೆಗಳಿಗೆ ಹೋಗಲು ಯಾರ ಅನುಮತಿ ಬೇಕಾಗುವುದಿಲ್ಲ, ಮನೆ ನಿಮ್ಮದಾದರೂ, ಬರಬೇಕು ಎಂದು ಅನ್ನಿಸಿದಾಗ ನೇರವಾಗಿ ಬರುತ್ತೇವೆ’ ಎಂದು ಹೇಳಿದ್ದೆ.

ಈಗ ಲಾರಾ ಮುಗುಳ್ನಕ್ಕು ನನ್ನನ್ನು ಸ್ವಾಗತಿಸುತ್ತಿದ್ದರು. ನನ್ನನ್ನು ನೋಡಿ ಗಾಬರಿ ಪಡುತ್ತಿರಲಿಲ್ಲ, ಹುಬ್ಬೇರಿಸುತ್ತಲೂ ಇರಲಿಲ್ಲ. ಅಂದು ನನ್ನ ಕೈಯಲ್ಲಿ ಕೇಕ್ ಕಂಡು ಆಶ್ಚರ್ಯದಿಂದ ಕೇಳಿದರು, ‘ಒಳ್ಳೆ ಸುದ್ದಿ ಇದೆಯೇ?’

ನಾನು ಉತ್ಸಾಹದಿಂದ ಹೇಳಿದೆ, ‘ಲಾರಾ, ನನಗೆ ಕೆಲಸ ಸಿಕ್ಕಿತು...’

‘ಸೂಪರ್!’ ಎಂದು ನನ್ನನ್ನು ತಬ್ಬಿಕೊಂಡು ಹಾರೈಸಿದ್ದರು, ಟೆಲ್ಲಲುಯಕಾ! (ಡ್ಯಾನಿಶ್ ಭಾಷೆಯಲ್ಲಿ ಧನ್ಯವಾದ)

‘ಥ್ಯಾಂಕ್ಸ್!’ ನಾನು ಧನ್ಯವಾದ ಹೇಳಿದೆ.

‘ಕೇಕ್‌ನೊಂದಿಗೆ ಸ್ಟ್ರಾಂಗ್ ಕಾಫಿ...’ ಅವರು ಚಿಟಿಕೆ ಹೊಡೆಯುತ್ತಾ ಹೇಳಿ, ಕಾಫಿ ಯಂತ್ರದಲ್ಲಿ ತಕ್ಷಣ ಕಾಫಿಯನ್ನು ತಯಾರಿಸಿದರು, ಒಂದು ಆಕರ್ಷಕ ಬೋನ್ ಚೀನಾ ಕಪ್ ಸೆಟ್‌ನಲ್ಲಿ ಕಾಫಿ ಹಾಕಿಕೊಂಡು ತಂದರು. ‘ತುಂಬಾ ಸುಂದರ ಡಿಸೈನ್, ಬಣ್ಣ ಸಹ ತುಂಬಾ ಆಕರ್ಷಕವಾಗಿದೆ’ ಎಂದೆ.

‘ಇಲ್ಲಿಯ ಮ್ಯಾಗಸೀನ್ ಸೂಪರ್ ಮಾರ್ಕೆಟ್‌ನಲ್ಲಿ ಸೇಲ್ ನಡೀತಿತ್ತು, ಆಗ ಖರೀದಿಸಿದ್ದೆ. ಇದು ತುಂಬಾ ದುಬಾರಿ ಬೆಲೆಗೆ ಸಿಗುತ್ತೆ’ ಎಂದರು.

ನಾನೂ ಹೌದೆಂಬಂತೆ ತಲೆಯಾಡಿಸಿದೆ.

‘ನನ್ನ ಹತ್ರ ಬೇಕಾದಷ್ಟು ಸಮಯವಿದೆ, ನಾನು ರಿಟೈರ್ ಆಗಿದ್ದೇನೆ. ಅಲ್ಲಿ–ಇಲ್ಲಿ ಅಂತ ತಿರುಗಾಡುತ್ತೇನೆ. ಎಲ್ಲಿ ಸೇಲ್ ಆರಂಭವಾಗುತ್ತೆ ಅಂತ ಅತ್ತ–ಇತ್ತ ಅಡ್ಡಾಡುತ್ತೇನೆ. ನನ್ನೆಲ್ಲಾ ಮನೆಯ ಎಲ್ಲಾ ಸಾಮಾನುಗಳನ್ನು ಸೇಲ್‌ನಲ್ಲಿಯೇ ಖರೀದಿಸಿದ್ದೇನೆ.’

ನಾನು ಅವರ ಮನೆಯ ಸುತ್ತಮುತ್ತ ಕಣ್ಣಾಡಿಸಿದೆ. ಡಿಸೆಂಬರ್ ತಿಂಗಳು ಆರಂಭಗೊಂಡಿತ್ತು. ಲಾರಾರ ಮನೆಯ ಇಂಟೀರಿಯರ್ ಕ್ರಿಸ್‌ಮಸ್ ಥೀಮ್ ಪ್ರಕಾರ ಸಜ್ಜಾಗಿತ್ತು. ಮನೆಯ ಸಂಪೂರ್ಣ ಶೃಂಗಾರದಲ್ಲಿ ಗಾಢ ಬಣ್ಣವನ್ನು ಬಳಸಲಾಗಿತ್ತು; ಈ ಬಣ್ಣಗಳಲ್ಲಿ ಕೆಂಪು, ಸುವರ್ಣ ಮತ್ತು ಹಸುರು ಬಣ್ಣಗಳನ್ನೇ ಹೆಚ್ಚು ಬಳಸಲಾಗಿತ್ತು. ಕ್ರಿಸ್‌ಮಸ್ ಶೃಂಗಾರದ ವಸ್ತುಗಳಿಂದ ಇಡೀ ಮನೆ ಅಲಂಕೃತಗೊಂಡಿತ್ತು. ಮನೆಯ ಮೂಲೆ ಮೂಲೆ ಕ್ರಿಸ್‌ಮಸ್ ವಾತಾವರಣದಿಂದ ಕಲೆತಿತ್ತು.

ನಾನು ಲಾರಾರಿಂದ ಪ್ರೇರಿತಳಾಗಿ ನನ್ನ ಮನೆಗೊಂದು ಥೀಮ್ ಕೊಟ್ಟು ಶೃಂಗರಿಸಿದ್ದೆ. ಅನೇಕ ಬಾರಿ ಮನೆಯನ್ನು ಪುರಾತನ ಅಂದಾಜಿನಲ್ಲಿ ಶೃಂಗರಿಸುವುದು ಸಹ ಹಿತವೆನಿಸುತ್ತದೆ. ಇದಕ್ಕಾಗಿ ನಾನು ಹೆಚ್ಚು ಖರ್ಚು ಮಾಡಬೇಕಾದ ಅಗತ್ಯವುಂಟಾಗಲಿಲ್ಲ. ಲಾರಾ ಕೊಟ್ಟಿದ್ದ ಹಳೆಯ ಮಂಚವನ್ನು ಗೋಡೆಯ ಬಳಿಗಿಟ್ಟು, ಅದರ ಮೇಲೆ ಹಾಸಿಗೆ ಹಾಸಿದೆ. ಒಂದು ಸುಂದರ ರಗ್ಗನ್ನು ಅದರ ಮೇಲೆ ಹಾಸಿ, ಅದರ ಮೇಲೆ ದೊಡ್ಡ ಆಕಾರದ ದಿಂಬುಗಳನ್ನಿಟ್ಟೆ. ಲಾರಾ ನಮ್ಮ ಮನೆಗೆ ಬಂದಾಗಲೆಲ್ಲಾ, ಈ ಮಂಚದ ಮೇಲೆಯೇ ಕೂರುತ್ತಿದ್ದರು.

ಸೋಫಾ ಕವರ್, ಕುಶನ್ಸ್ ಮತ್ತು ಪರದೆಗಳಿಗೆ ಹೊಳೆಯುವ ಕಿತ್ತಳೆ, ದಟ್ಟ ನೀಲಿ ಮತ್ತು ಸಿಲ್ವರ್ ಶೇಡ್ಸ್‌ಗಳನ್ನು ಉಪಯೋಗಿಸಿದೆ. ಡೆಕೊರೇಟಿವ್ ಪೀಸಸ್‌ನಲ್ಲಿ ಮಾತೆ ಮರಿಯಮ್ಮಳ ಮೂರ್ತಿ, ಪಂಜರ, ಲಾಟೀನು ಮತ್ತು ಮಣ್ಣಿನಿಂದಾದ ಗಂಟೆ ಇತ್ಯಾದಿಗಳನ್ನಿಟ್ಟೆ. ಗಾಜಿನ ಜಾರ್‌ನಲ್ಲಿ, ಕಂಪು ಸೂಸುವ ಅರೋಮಾ ಕ್ಯಾಂಡಲ್, ಒಂದು ಹಳೆಯ ಬುಟ್ಟಿಯನ್ನು ಪಗಡೆಕಾಯಿಗಳಿಂದ ಶೃಂಗರಿಸಿ ಗೋಡೆಗೆ ನೇತು ಹಾಕಿದೆ. ಹಿತ್ತಾಳೆ ಮತ್ತು ಮಣ್ಣಿನ ಡಿಸೈನರ್ ಪಾಟ್‌ಗಳಲ್ಲಿ ಹೂವಿನ ಗಿಡಗಳನ್ನು ಅಲಂಕಾರಿಕವಾಗಿ ಜೋಡಿಸಿದೆ. ಎಲ್ಲರೂ ನನ್ನ ಸೃಜನಶೀಲತೆಯನ್ನು ಮನಸಾರೆ ಪ್ರಶಂಸಿಸಿದರು.

‘ಇದು ಯಾವ ಥೀಮ್?’ ಲಾರಾ ಕೇಳಿದರು.

‘ಗ್ಲೋಬಲ್ ದೇಸಿ ಥೀಮ್’ ನನಗೆ ಅರ್ಥವಾಗದೆ ಹೇಳಿದೆ.

‘ಇದೆಂಥ ಥೀಮ್?’

‘ಇಂಡಿಯನ್, ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ನೇಪಾಳಿ ಸ್ಟೈಲ್ – ಒಂದೇ ವಿಧದಂಥ ಭಾಷೆ, ಒಂದೇ ವಿಧದಂಥ ವಿಚಾರಗಳು, ಸಂಸ್ಕೃತಿಯನ್ನು ಹೊಂದಿದ ಜನ’.

‘ಹೂಂ... ಇಂಟರೆಸ್ಟಿಂಗ್...’ ಎಂದರು ಲಾರಾ.

ನನಗೆ ಮನೆಯ ಶೃಂಗಾರದ ವಿಷಯದಲ್ಲಿ ಲಾರಾ ಸಲಹೆಯನ್ನು ಕೊಡುತ್ತಿದ್ದರು, ನಾನೂ ಅವರಿಗೆ ಸಲಹೆಯನ್ನು ಕೊಡುತ್ತಿದ್ದೆ. ಲಾರ್ಸ್ ತಂದೆ ಡೇನಿಯಲ್ ಒಮ್ಮೆ ತಮಾಷೆ ಮಾಡುತ್ತಾ ಹೇಳಿದರು – ‘ಅತ್ತೆ ಸೊಸೆಯಲ್ಲಿ ಅವರವರ ಮನೆಗಳನ್ನು ಅಲಂಕರಿಸುವ ಬಗ್ಗೆ ಸ್ಪರ್ಧೆಯೇ ನಡೆಯುತ್ತಿದೆ.’

ಸರಿ, ನಾನು ಮತ್ತು ಲಾರಾ ಒಟ್ಟಿಗೆ ಕೂತು ಕಾಫಿ ಕುಡಿದೆವು, ಕೇಕ್ ತಿಂದೆವು. ತುಂಬಾ ಮಾತುಕತೆಯಾಡಿದೆವು. ಮಾತಿನ ಮಧ್ಯೆ ಅವರು, ‘ನಾನು ಕ್ರಿಸ್‌ಮಸ್ ನಂತರ ಯೂಲೆಂಡ್‌ಗೆ (ಜಟ್‌ಲೆಂಡ್‌ನ್ನು ಯೂಲೆಂಡ್ ಎಂದೂ ಹೇಳಲಾಗುತ್ತದೆ) ಹೋಗುತ್ತಿದ್ದೇನೆ’ ಎಂದರು.

‘ಅಮ್ಮನ ಆರೋಗ್ಯ ತುಂಬಾ ಹದಗೆಟ್ಟಿದೆ...’ ಎಂದೂ ಹೇಳಿದರು.

‘ಎಷ್ಟು ದಿನಗಳು ಹೋಗ್ತೀರಿ?’

‘ನಾನಲ್ಲಿಗೆ ಶಿಫ್ಟ್ ಆಗ್ತಿದ್ದೀನಿ – ಆರು ತಿಂಗಳು, ವರ್ಷ, ಎರಡು ವರ್ಷ... ಅಮ್ಮ ಬದುಕಿರುವವರೆಗೂ...’

‘ಓಹ್... ನೀವು ದೀರ್ಘ ಅವಧಿಗೆ ಹೋಗುತ್ತಿದ್ದೀರಿ’.

‘ಇಲ್ಲ, ಅಮ್ಮ ಇನ್ನು ಹೆಚ್ಚು ಕಾಲ ಬದುಕ್ತಾರೆ ಅಂತ ನನಗೆ ಅನ್ನಿಸಲ್ಲ’.

‘ನಿಮ್ಮ ಈ ಮನೆಯ ಗತಿ ಏನು? ಮನೆಗೆ ಬೀಗ ಹಾಕಿ ಹೋಗ್ತೀರಾ?’ ಕೇಳಿದೆ.

‘ಒಂದು ವರ್ಷಕ್ಕೆ ಲೀಸ್ ಮಾಡ್ತಿದ್ದೀನಿ, ಅಗತ್ಯ ಬಿದ್ದರೆ ಎರಡು ವರ್ಷಗಳಿಗೂ ವಿಸ್ತರಿಸುತ್ತೇನೆ’.

‘ನಿಮ್ಮ ಫರ್ನೀಚರ್ ಮತ್ತು ವಸ್ತುಗಳನ್ನೇನು ಮಾಡ್ತೀರ?’

‘ಫರ್ನೀಚರ್‌ಗಳೊಂದಿಗೇ ಲೀಸ್ ಮಾಡುತ್ತಿದ್ದೇನೆ!’